**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಓ.ಎಸ್.ನಂ. 06/2018.**

**ಪಿ ಡಬ್ಲ್ಯೂಃ 1**

**ದಿನಾಂಕಃ 02-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ1 ರಿಂದ 11 ನೇ ಪ್ರತಿವಾದಿಯರ ಪರ ಶ್ರೀ ಪಿ.ವಿ.ಎನ್. ವಕೀಲರಿಂದಃ**

ನಾನು ಡಿಪ್ಲೊಮೊ ಓದಿರುತ್ತೇನೆ. ವಾದಿ ಹಾಗೂ ಪ್ರತಿವಾದಿಯರು ನನಗೆ ಸಂಬಂಧಿಕರು ಇರುವುದಿಲ್ಲ, ಪರಿಚಯ ಇರುತ್ತಾರೆ. ನನ್ನ ಊರು ಕದರಮಂಡಲಗಿ. ನಮ್ಮ ತಂದೆ ಕಾಂಟ್ರೆಕ್ಟ ಕೆಲಸ ಮಾಡುತ್ತಿದ್ದರು ಆ ಕಾರಣದಿಂದ ವಾದಿಯರು ನಮ್ಮ ತಂದೆಗೆ ಪರಿಚಯ ಇರುತ್ತಾರೆ. ಪ್ರತಿವಾದಿಯನ್ನು ನೋಡಿರುತ್ತೇನೆ ಆದರೆ ಪರಿಚಯ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ. ಯಾರ ಯಾರು ಯಾವ ಯಾವ ಸರ್ವೆ ನಂಬರಲ್ಲಿ ವಹಿವಾಟು ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ದಿನಾಂಕಃ 25.12.2017 ರಂದು ಹಿರಿಯರು ಸೇರಿ ಇವರ ಕುಟುಂಬದ ಸಲುವಾಗಿ ಪಂಚಾಯತಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಮೇಶಪ್ಪ, ಮುದಿಗೌಡ್ರ ಉಳಿದವರು ಊರಿನ ಹಿರಿಯರು ಸೇರಿದ್ದರು ನಾನು ಸಹ ಹೋಗಿದ್ದೆ ಅವರ ಹೆಸರು ಹೇಳಲು ಬರುವುದಿಲ್ಲ. ಪಂಚಾಯತಿಯನ್ನು ಮಾಸ್ತೆಮ್ಮನ ದೇವಸ್ಥಾನಲ್ಲಿ ಸೇರಿಸಿದ್ದರು. ನಾನು ಅವರನ್ನು ಎಷ್ಟು ಆಸ್ತಿಗಳಿವೆ ಎಂದು ಕೇಳಿರುವುದಿಲ್ಲ. ವಾಟ್ನಿ ಆದ ಬಗ್ಗೆ ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ಯಾವ ಆಸ್ತಿ ಯಾರ ಹೆಸರಿನಲ್ಲಿದೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿರುವುದಿಲ್ಲ. ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12 ರಿಂದ 53 ನೇ ಎದುರುಗಾರರು ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.